ಓದಿ ಹೇಳಿದ್ದರಿಂದಾಗಿ ದ್ಯಾವಕ್ಕ ಮನದೊಳಗೇ ಖುಷಿಪಡುತ್ತಾ ಮನೆ ಕಡೆ ನಡೆದಳು. ಆಗಲೇ ಅವಳ ಕಣ್ಣುಗಳ ಮುಂದೆ ಗೌರ್ಮೆಂಟ್‌ನೋರು ಕಟ್ಟಿಸಿಕೊಟ್ಟಿದ್ದ ಮನೆ ಆಕಾಶದೆತ್ತರಕ್ಕೆ ಬೆಳೆದು ನಿಂತಿತ್ತು.

ತಿಂಗಳುಗಳು ಕಳೆದಂತೆ ಗೌರ್ಮೆಂಟ್ ಮನೆ ಮಂಜೂರಾತಿ ಆದೇಶ ಬರುವುದನ್ನೇ ಎದುರು ನೋಡುತ್ತಾ ಅವರಿವರನ್ನು ಕೇಳುತ್ತಲೇ ದ್ಯಾವಕ್ಕ ದಿನ ದೂಡುತ್ತಿದ್ದಳು. ಕೊನೆಗೊಂದು ದಿನ ಜೀವ ತಡೆಯಲಾರದೇ ಪಂಚಾಯಿತಿ ಆಫೀಸಿಗೆ ಹೋಗಿ ವಿಚಾರಿಸಬೇಕೆಂದು ಹೋದಾಗ ಅಲ್ಲಿ ಹಟ್ಟಿಯ ಬಿಳಿಲುಂಗಿ ಚಿಕ್ಕಣ್ಣ ಇದ್ದನು. ದ್ಯಾವಕ್ಕ ಬಾಯ್ದೆರೆಯುವ ಮುಂಚಿತವಾಗಿಯೇ 'ದ್ಯಾವಕ್ಕ, ಈ ಸಾರಿ ನಿನಗೆ ಮನೆ ಮಂಜೂರಾತಿ ಆಗಿಲ್ಲ ಕಣವ್ವ, ಅದು ಟೆಕ್ನಿಕಲ್ ಸಮಸ್ಯೆಯಾಗಿದೆ. ನಿನ್ನ ಆಧಾರ್ ಕಾರ್ಡ್ ಸಂಖ್ಯೆ ಹೊಂದಾಣಿಕೆಯಾಗಿಲ್ಲಂತೆ. ಮುಂದಿನ ವರ್ಷ ನೋಡೋಣ' ಎಂದು ನಿರುದ್ವಿಗ್ನವಾಗಿ, ಇದೇನು ಅಷ್ಟು ಮಹತ್ವದ ವಿಷಯವಲ್ಲ ಎಂಬಂತೆ ಹೇಳಿದ. ಇದರಿಂದ ಕೋಪಗೊಂಡ ದ್ಯಾವಕ್ಕ 'ಅದ್ಯಾವ ಟೆಕ್ನಿಕ್ ಪಿಕ್ನಿಕ್ಕೋ ನಿಮ್ದು! ಆವತ್ತು ನನ್ನ ಹೆಸರು ಗ್ರಾಮಸಭೆಯಲ್ಲಿ ಓದಿ ಹೇಳಿದವನೇ ನೀನು. ಏನೇನೋ ಹೇಳಬೇಡ ಸುಮ್ಕಿರು. ನಾನು ಅಧಿಕಾರಿಗಳನ್ನೇ ಕೇಳ್ತೀನಿ' ಎಂದು ಕುರ್ಚಿಯಲ್ಲಿ ನಿರಾಯಾಸವಾಗಿ ಕುಳಿತು ಹರಟೆ ಹೊಡೆಯುತ್ತಿದ್ದ ಅಧಿಕಾರಿಯನ್ನು ಜೋರು ಬಾಯಿಯಲ್ಲಿಯೇ ಕೇಳಿದಳು. ಅವರೂ ಸಹ ಚಿಕ್ಕಣ್ಣ ಹೇಳಿದಂತೆಯೇ ಹೇಳಿದರು. 'ಇಲ್ಲ ಸಾರು, ಇದರಲ್ಲಿ ಏನೋ ಮೋಸ ಮಾಡೀವ್ರೀ, ನನ್ನ ಹೆಸರು ಓದಿ ಹೇಳಿದ್ದಿರಿ ಅವತ್ತು. ಯಾರೋ ಹೇಳಿದ ಮಾತು ಕಟ್ಕೊಂಡು ನನಗೆ ಈಗ ಮೋಸ ಮಾಡಿದ್ದೀರಿ' ಎಂದು ಒಂದೇ ಸಮನೆ ವದರಾಡುತ್ತಿದ್ದ ದ್ಯಾವಕ್ಕನನ್ನು ಅಲ್ಲಿದ್ದ ಸಿಬ್ಬಂದಿ, ಅಧಿಕಾರಿಗಳು ಗದರಿಸಿ ಕಳುಹಿಸಿದರು.

ದ್ಯಾವಕ್ಕ ಪಂಚಾಯಿತಿ ಆಫೀಸಿನ ಹೊರಗೆ ನಿಂತು ಊರಿನ ಮುಖಂಡರನ್ನು, ಅಧಿಕಾರಿಗಳನ್ನು, ಹಟ್ಟಿಯ ಯಜಮಾನರನ್ನ ಮನಸೋ ಇಚ್ಛೆ ಬೈಯುತ್ತಾ, ಹಟ್ಟಿ ತಲುಪಿದಳು. ಅಲ್ಲಿ ಹಟ್ಟಿ ದೇವರಾದ ಚಿತ್ರೇದೇವರ ಗುಡಿ ಮುಂದೆ ನಿಂತು 'ಹೇ ಚಿತ್ತಪ್ಪ ದೇವರೇ... ನಾನು ಪ್ರತಿ ಶನಿವಾರ ಉಪವಾಸವಿದ್ದು, ನೇಮ ನಿಷ್ಠೆಯಿಂದ ಬಾಯಿಗೆ ನೀರೂ ಸಹ ಹಾಕಿಕೊಳ್ಳದಂತೆ ವಾರ ಪೂಜೆಯನ್ನ ಮಾಡಿಕೊಂಡು ಬಂದಿದ್ದಕ್ಕೆ ಇದೇನಾ ಬೋಮಾನ ನೀನು ಕೊಟ್ಟಿದ್ದು. ನಿನ್ನ ಕೈಯಲ್ಲಿ ನನಗೊಂದು ಗೌರ್ಮೆಂಟ್ ಮನೆ ಕೊಡಿಸಲಿಕ್ಕೆ ಆಗಲಿಲ್ಲವಲ್ಲಾ! ನೀನೇನು ಮಾಡಿಸಿ ಕೊಡ್ತೀಯೋ, ನೀನು ನನ್ನಂಗೇ ಗುಡಿಸಲಲ್ಲಿ ಇದೀಯಾ? ಪಾಪ ನಿನಗೇ ಒಂದು ಸಿಮೆಂಟ್ ಶೀಟಿನ ಗುಡಿಯಿಲ್ಲ! ಇನ್ನು ನನಗೇನು ಕಟ್ಟಿಸಿ ಕೊಟ್ಟೀಯಾ. ನಿನ್ನ ಕಣ್ಣೆದುರಿಗೇ ನಡೀತಲ್ಲ ಮೋಸ... ನೋಡ್ಕೊಂಡು ಸುಮ್ನೆ ಕುಂತಿದೀಯಾ. ಇನ್ನು ಬಿಡು... ನಾನು ಎಮ್ಮೆಲ್ಲೇ ಆಗ್ತೀನಿ, ಪಂಚಾಯಿತಿ ಮೆಂಬರ್ ಆಗ್ತೀನಿ. ಆವಾಗ ನಿನಗೊಂದು ಒಳ್ಳೆ ಸಿಮೆಂಟ್ ಶೀಟಿನ ಗುಡಿ ಕಟ್ಟಿಸಿಕೊಡ್ತೀನಿ...' ಎಂದು ಮಾತನಾಡುತ್ತಲೇ ಇದ್ದಳು. ಇದನ್ನ ಕಂಡು ಹಟ್ಟಿಯ ಜನ ದ್ಯಾವಕ್ಕನನ್ನು ಸುತ್ತುವರೆದರು. ಕೆಲವರು ಅವಳನ್ನು ಸಮಾಧಾನಿಸಿ ಮನೆಯ ಕಡೆ ಎಳೆದುಕೊಂಡು ಹೋಗಲು ಪ್ರಯತ್ನಿಸಿದರು.

ಮನದೊಳಗೆ ಕಟ್ಟಿಕೊಂಡಿದ್ದ ಆಸೆಯ ಗೋಪುರ ಜರ್ರನೆ ಸರಿದು ಕುಸಿದ ಆಘಾತಕ್ಕೆ, ನಿರಾಸೆ ಮತ್ತು ಸಿಟ್ಟು ತುಂಬಿದ ಆಕೆಯ ಮುಖ ಬಿರುಸುಗೊಂಡು ಕಣ್ಣುಗಳು ಕೆಂಪಾಗಿದ್ದವು. ಆಕೆಯ ತೂಗಾಟಕ್ಕೆ ಕಟ್ಟಿದ್ದ ಮುಡಿ ಬಿಚ್ಚಿಕೊಂಡಿತು. ಹಣೆಯಲ್ಲಿದ್ದ ಕಾಸಿನಗಲದ ಕುಂಕುಮ ಬೆವರಿಗೆ ಕದಡಿ ಹಣೆಯಮೇಲೆ ಸುರಿದಿದ್ದರಿಂದ ಊರ ಮಾರಮ್ಮನಂತೆ ಕಾಣುತ್ತಿದ್ದಳು. ತನ್ನ ಎರಡೂ ಕೈಗಳನ್ನು ಮೇಲೆತ್ತಿ ತಿರು ತಿರುಗಿ ಮಾರಿಗೊಂದು ಹೆಜ್ಜೆ ಹಾಕುತ್ತಾ ತನ್ನ ಗುಡಿಸಲಿನ ಕಡೆಗೆ ಓಡಿದಳು. ಮನೆಯೊಳಗೆ ತನ್ನ ಇಬ್ಬರು ಹೆಣ್ಣುಮಕ್ಕಳನ್ನು ತಬ್ಬಿಕೊಂಡು ಗುಂಗಾರಿ ಹುಳದ ಕೊರತದಿಂದಾಗಿ ಗುಡಿಸಲಿನ ಕಟ್ಟಿಗೆ ಗಳಗಳಿಂದ ಬೀಳುತ್ತಿದ್ದ ಸಣ್ಣ ರವೆ ರವೆಯಂತಹ ದೂಳಿನ ಕಣಗಳನ್ನು ದಿಟ್ಟಿಸಿ ನೋಡುತ್ತಲೇ ಇದ್ದಳು. ಆವೇಗದ ಉಸಿರಾಟದಿಂದಾಗಿ ಆಕೆಯ ದೇಹ ಮೇಲಕ್ಕೂ ಕೆಳಕ್ಕೂ ಆಡುತ್ತಿತ್ತು.

ಅಲ್ಲಿ ಸೇರಿದ್ದ ಜನರ ನಡುವಿನಿಂದ ಅವಳನ್ನೇ ನೋಡುತ್ತಿದ್ದ ಸೀರುಂಡೆಯ ಈರಜ್ಜಿ 'ದ್ಯಾವಕ್ಕನಿಗೆ ದೆವ್ವ ಮೆಟ್ಟಿಗೊಂಡಂಗೈತಿ. ಚಿತ್ರದೇವರ ಪೂಜಾರಪ್ಪನನ್ನು ಕರೆಸಿ ದೇವರ ದೀಪ ಮುಡಿಸಿ, ಧೂಪವನ್ನ ಮೈಗೆ ಹಚ್ಚಿರಿ, ಆಮೇಲೆ ಸಂಜೆ ಮುಂದೆ ಚಿತ್ತಪ್ಪನ ಗಣೆ ಪದ ಕೇಳಿ ಏನೇನು ನೀವಾಳಿಸಿ ಹಾಕಬೇಕಂತ ಕೇಳಿರಿ' ಎಂದು ಹೇಳತೊಡಗಿದಳು. ●